200 ಚದರ ಅಡಿ)ನ ಮನೆ ಸಾಕು. ಅದರಲ್ಲೇ ಅಡಿಗೆ ಮನೆ ಮತ್ತು ಬಚ್ಚಲು ಸೇರಿರುತ್ತಲ್ಲ? ಕಾಗದ ಪತ್ರಗಳಿಗೆ ಸಹಿ ಹಾಕುವಾಗ, ಜನರ ಕೈ ನಡುಗುತ್ತದೆ ನಾನು ನನ್ನ ಮನೆಯನ್ನು ಕೆಡವಲು ಒಪ್ಪಿದ್ದೇನೆ; ನಾನು ಇಲ್ಲಿಂದ ಹೊರ ಹೋಗಲು ಒಪ್ಪಿದ್ದೇನೆ; ಹಾಂ. ಹೌದು. ನನಗೆ ಸಿಗಬೇಕಾದ ಪರಿಹಾರ ಸಿಕ್ಕಿದೆ. ಆ ಪರಿಹಾರವೆನ್ನುವುದು ಸಾಂಕೇತಿಕ ಮಾತ್ರ. ಶೂನ್ಯಕ್ಕೆ ತುಂಬ ಹತ್ತಿರ.

ತಾವು ಹುಟ್ಟಿ ಬೆಳೆದ ಸ್ಥಳದಿಂದ ಬೇರು ಸಹಿತ ಕಿತ್ತು ಆಚೆಗೆ ಕಳಿಸಿದ ವೃದ್ಧರು ತಮ್ಮ ತಮ್ಮ ಬೆಂಕಿ ಪೊಟ್ಟಣಗಳಂಥ, ಒಂಬತ್ತೋ ಹತ್ತೋ ಮಜಲಿನಲ್ಲಿರುವ ಫ್ಲಾಟ್‌ಗಳಲ್ಲಿ, ಕಾಲ ಕಳೆಯತೊಡಗಿದರು. ನೆರೆಹೊರೆಯವರು, ಸ್ನೇಹಿತರ ಜತೆ ಮಾತು, ಜಗಳ ಎಲ್ಲಾ ಕಳೆದ ಹೋದ ಕತೆ. ಯಾಕೆಂದರೆ ಅವರೆಲ್ಲ ಬುಖಾರೆಸ್ಟ್‌ನ ಬೇರೆ ಬೇರೆ ಕಡೆ ಚದರಿ ಹೋಗಿದ್ದರು. ಆತ್ಮಹತ್ಯೆ ಮಾಡಿಕೊಂಡವರ ಅಥವಾ ಹೃದಯಸ್ತಂಭನದಿಂದ ಸತ್ತವರ ಲೆಕ್ಕ ಇಟ್ಟವರಾರು? ಆಕಸ್ಮಾತ್ ಯಾರಾದರೂ ತೊಂದರೆ ಉಂಟು ಮಾಡಲು ಹವಣಿಸಿದರೆ, ಸೆಕ್ಯುರಿಟೇಟ್‌ಗೆ ಅವರನ್ನು ಇಲ್ಲವಾಗಿಸುವ ಬಗೆ ಗೊತ್ತು. ಆಮೇಲೆ ಎಲ್ಲಿನ ಮಾತು? ಎಲ್ಲಿಯ ತೊಂದರೆ?

ಯುರೇನಸ್ ಜಿಲ್ಲೆಯ ಕೆಲವರು ಅಲ್ಲಿನ ಪಾಸ್‌ಪೋರ್ಟ್ ಕಚೇರಿಗೆ ಹೋಗಿ ಬರುವುದನ್ನೇ ಕಾಯಕವನ್ನಾಗಿಸಿಕೊಂಡಿದ್ದರು. ಅವರಿಗೆಲ್ಲ ಸುಗ್ಗಿಯೋ ಸುಗ್ಗಿ. ಅಧಿಕಾರಿಗಳು ಅವರು ಬೇಡ ಎನ್ನಲಾಗದ ಅವಕಾಶವೊಂದನ್ನು ಅವರಿಗೆ ಕೊಟ್ಟರು. ತಮ್ಮ ಎಲ್ಲದನ್ನೂ ನಮಗೆ ಕೊಡಿ. ಪಾಸ್‌ಪೊರ್ಟ್ ತೆಗೆದುಕೊಳ್ಳಿ. ಸುಮಾರು ಜನ ಪಾಸ್‌ಪೋರ್ಟ್ ಆಯ್ಕೆ ಮಾಡಿಕೊಂಡರು ಎಂದು ಹೇಳಬೇಕಿಲ್ಲವಷ್ಟೆ?

ಈ ಮರಳುಗಾಡು ವಿಸ್ತರಿಸುತ್ತದೆ. ಚೌಸೆಸ್ಕೋ ಪ್ರತಿಯೊಂದು ಬಾರಿ ತಜ್ಞರನ್ನು ಅಥವಾ ರಾಜಕೀಯದಲ್ಲಿರುವ ತನ್ನ ಸ್ನೇಹಿತರನ್ನು ಭೇಟಿಯಾದಾಗಲೆಲ್ಲ, ಈ ಪ್ರಜೆಗಳ ಅರಮನೆಯನ್ನು ಸ್ವಲ್ಪ ಸ್ವಲ್ಪವೇ ವಿಸ್ತರಿಸುವುದಾಗಿ ತಿಳಿಸುತ್ತಾರೆ.

ಒಬ್ಬ ವಾಸ್ತುಶಿಲ್ಪಿ ಹೇಳುತ್ತಾನೆ: 'ದಯವಿಟ್ಟು ಕ್ಷಮಿಸಿ, ಈ ಅರಮನೆಯ ಹೊಸ ಪರಿಧಿಯಿಂದ ನನ್ನ ಮನೆ ಕೊಂಚ ದೂರವೇ ಇದೆ.'

'ಏನೂ ಆಗುವುದಿಲ್ಲ, ನೀವೇನೂ ಹೆದರದಿರಿ' ಚೌಸೆಸ್ಕೋ ಅವರ ಆಶ್ವಾಸನೆ.

ಎರಡು ದಿನಗಳಾದ ಮೇಲೆ, ಆ ವಾಸ್ತುಶಿಲ್ಪಿ ಕೆಲಸದಿಂದ ಮರಳಿದಾಗ ಕಂಡದ್ದು ತನ್ನ ಮನೆಯ ಅವಶೇಷ. ಅವನು ಅಲ್ಲೇ ಕುಸಿದು ಸಾಯುತ್ತಾನೆ. ರೊಮೇನಿಯನ್ನರಿಗೆ ಈ ಕತೆಯೆಂದರೆ ತುಂಬ ಇಷ್ಟ ಎಂದು ಕಾಣುತ್ತದೆ. ನಾನು ಪ್ರತಿಯೊಂದು ಬಾರಿ ಅರಮನೆಯ ಬಗ್ಗೆ ಚರ್ಚಿಸಿದಾಗಲೆಲ್ಲ, ಈ ಕತೆಯನ್ನು ಉದ್ಧರಿಸಲಾಗುತ್ತದೆ.

ರೊಮೇನಿಯನ್ನರ ಅನಿರ್ಬಂಧಿತ ಯೋಜನೆಗಳಿಗೆ ರೂಪಕವಾಗಬೇಕು ಈ ಪ್ರಜೆಗಳ ಅರಮನೆ. ಈ ಅರಮನೆಯನ್ನು ಬುಖಾರೆಸ್ಟಿನ ಮೂಲೆ ಮೂಲೆಯಿಂದಲೂ ಕಾಣುವಂತಾಗಬೇಕು. ಹಾಗಿದ್ದರಲ್ಲವೇ ಚೌಸೆಸ್ಕೋ ಅವರ ಯಶಸ್ವಿ ಸರ್ಕಾರದ ಉದಾತ್ತತೆ ಎಲ್ಲರಿಗೂ ತಿಳಿಯುವುದು? ಇಡೀ ವಿಶ್ವ ಆಶ್ಚರ್ಯದಿಂದ ನೋಡುವಂತಾಗಲಿ.

ವಿಶ್ವವಿದ್ಯಾಲಯದ ಇತಿಹಾಸ ವಿಭಾಗವಿರುವುದು ಮೇಲಿನ ಮಹಡಿಯಲ್ಲಿ. ಅಲ್ಲಿಂದ ಬುಖಾರೆಸ್ಟನ್ನು ನೋಡಿದಾಗ ಕಾಣುವುದು ಈರುಳ್ಳಿಯಂತೆ ಕಾಣುವ ಚರ್ಚ್‌ಗಳು, ಹೊಸ ಕಟ್ಟಡಗಳ ಆಯತಾಕಾರದ ಮೇಲ್ಛಾವಣಿ, ಹಾವಿನಂತೆ ಹರಿಯುವ ಹಳೆಯ ರಸ್ತೆಗಳು ಮತ್ತು ಇವೆಲ್ಲದರ ನಡುವೆ, ಕಮ್ಯುನಿಸ್ಟ್ ಯುಗದಲ್ಲಿ ಕಟ್ಟಲಾದ ಕಾಂಕ್ರೀಟಿನ ಬೃಹತ್ ಕಟ್ಟಡಗಳು. ವಯಸ್ಸಿನಲ್ಲಿ ಚಿಕ್ಕದಾದರೂ ತುಂಬ ಹಳೆಯದಾದಂತೆ ಕಾಣುವ ಪೊಟ್ಟಣಗಳು. ಈ ಎಲ್ಲವೂ